# URBAN DEVELOPMENT AUTHORITY, KALABURAGI

# ANNUAL REPORT FOR THE YEAR 2019-20

# ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ

# 2019-20ನೇ ಸಾಲಿನ ವಾರ್ಷಿಕ ವರದಿ

## ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ 2019–20 ನೇ ಸಾಲಿನ
## 01–04–2019 ರಿಂದ 31–03–2020 ರ ವರೆಗಿನ ವಾರ್ಷಿಕ ವರದಿ

**1. ವಾರ್ಷಿಕ ಅನುದಾನ ಮತ್ತು ಅದಕ್ಕನುಗುಣವಾಗಿ ಮಾಡಲಾದ ವೆಚ್ಚ (ಆಯ–ವ್ಯಯದಂತೆ)**

ಮೊತ್ತ ರೂ. ಲಕ್ಷಗಳಲ್ಲಿ

| ವರ್ಷ | ಆದಾಯ | ಖರ್ಚು |
|---|---|---|
| ಅಂದಾಜು ಆಯವ್ಯಯ ಪಟ್ಟಿಯಲ್ಲಿ ಕಾಯ್ದಿರಿಸಿದ ಮೊತ್ತ | 18452.00 | 18279.00 |
| ದಿನಾಂಕ 01–04–2019 ರಿಂದ 31–03–2020 ರ ವರೆಗೆ | 1074.76 | 3296.00 |

**2. ಬೇಡಿಕೆ ವಸೂಲಿ ಮತ್ತು ಬಾಕಿ ಪಟ್ಟಿ (ಡಿ.ಸಿ.ಬಿ)**

ರೂ. ಕೋಟಿಗಳಲ್ಲಿ

| ಒಟ್ಟು ಬಡಾವಣೆಗಳು | ಬೇಡಿಕೆ | ವಸೂಲಿ | ಬಾಕಿ |
|---|---|---|---|
| 20 | 0.5 | 0.49 | 0.37 |
| ನಿವೇಶನಗಳ ಮಾರಾಟದ ಮೊತ್ತ | 0.36 | | |
| ಒಟ್ಟು | 0.86 | 0.49 | 0.37 |

3. ಅನುಷ್ಠಾನಗೊಳಿಸಲಾದ ಅಭಿವೃದ್ಧಿ ಯೋಜನೆಗಳ ಆರ್ಥಿಕ ಮತ್ತು ಭೌತಿಕ ಪ್ರಗತಿ:

| ಕ್ರ ಸಂ. | ಅಭಿವೃದ್ಧಿ ಕಾಮಗಾರಿಗಳು | ಆರ್ಥಿಕ, ಪ್ರಗತಿ (ದಿನಾಂಕ 01-04-2019 ರಿಂದ 31-03-2020 ರವರೆಗೆ) ಮೊತ್ತ ಲಕ್ಷಗಳಲ್ಲಿ | |
|---|---|---|---|
| | | ಬಜೆಟನಲ್ಲಿ ಕಾಯ್ದಿರಿಸಿದ ಮೊತ್ತ | ಖರ್ಚಾದ ಮೊತ್ತ |
| 1 | ಯೋಜನೆಗಳಲ್ಲಿ ಅಭಿವೃದ್ಧಿ ಕಾಮಗಾರಿಗಳಾದ ರಸ್ತೆ ನಿರ್ಮಾಣ, ರಸ್ತೆ ಡಾಂಬರೀಕರಣ, ತೆರೆದ ಚರಂಡಿ, ಅಡಿಗಾಲುವೆ ನಿರ್ಮಾಣ, ವಿದ್ಯುತ್ತೀಕರಣ, ನೀರು ಸರಬರಾಜು, ಒಳಚರಂಡಿ ನಿರ್ಮಾಣ, ಕಚೇರಿ ಕಟ್ಟಡದ ಮೆಂಟೆನನ್ಸ್, ಪ್ರಾಧಿಕಾರದ ಮತ್ತು ಖಾಸಗಿ ಬಡಾವಣೆಯಲ್ಲಿರುವ ಪಾರ್ಕಗಳಿಗೆ ಕಂಪೌಂಡ ಗೋಡೆ ಹಾಗೂ ವಾಕಿಂಗ್ ಟ್ರ್ಯಾಕ್ ನಿರ್ಮಿಸುವುದು, ಕಲ್ಯಾಣ ಮಂಟಪಗಳ ನಿರ್ಮಾಣ, ಸುವರ್ಣ ಕರ್ನಾಟಕ ಶಾಪಿಂಗ್‌ಮಾಲ್ ನಿರ್ಮಾಣ ಹಾಗೂ ನಗರ ಸೌಂದರ್ಯೀಕರಣದಡಿಯಲ್ಲಿಯ ಮುಂತಾದ ಕಾಮಗಾರಿಗಳು. | 4018.00 | 769.11 |
| 2 | * ಎಂ.ಎಸ್.ಕೆ.ಮಿಲ್ ವಾಣಿಜ್ಯ ಮತ್ತು ವಸತಿ ಯೋಜನೆಯಲ್ಲಿಯ ಅಭಿವೃದ್ಧಿ ಕಾಮಗಾರಿಗಳು<br>* ಎಂ.ಎಸ್.ಕೆ.ಮಿಲ್ ಹಂತ-2 (ಮಾದರಸನ ಹಳ್ಳಿ) ಯೋಜನೆಯಲ್ಲಿಯ ಅಭಿವೃದ್ಧಿ ಕಾಮಗಾರಿಗಳು. | 1335.00 | 453.83 |
| 3. | ಅಟಲ್ ಬಿಹಾರಿ ವಾಜಪೇಯಿ (ಕೋಟನೂರ (ಡಿ) ಬಡಾವಣೆ | 1730.00 | 897.00 |
| | ಒಟ್ಟು | **7083.00** | **2119.94** |

**ಭೌತಿಕ ಪ್ರಗತಿ :-**

1. 2019-20 ನೇ ಸಾಲಿನಲ್ಲಿ ಪ್ರಾಧಿಕಾರದ (6) ಬಡಾವಣೆಗಳಲ್ಲಿ ಮತ್ತು ನಗರ ಸೌಂದರ್ಯೀಕರಣದಡಿಯಲ್ಲಿ ಕಳೆದ ಸಾಲಿನ ಮುಂದುವರಿದ ಕಾಮಗಾರಿಗಳನ್ನೊಳಗೊಂಡು ಅಂದರೆ ಮೆಟಲ ರಸ್ತೆ, ರಸ್ತೆ ಡಾಂಬರೀಕರಣ, ಚರಂಡಿ ನಿರ್ಮಾಣ, ಅಡಿಗಾಲುವೆ ನಿರ್ಮಾಣ, ನೀರು ಸರಬರಾಜು, ಒಳಚರಂಡಿ ಅಳವಡಣೆ, ವಿದ್ಯುತ್ತೀಕರಣಗಳಿಗಾಗಿ ಮತ್ತು ಪಾರ್ಕಗಳಿಗೆ ಆವರಣಗೋಡೆ ನಿರ್ಮಾಣ ಇತ್ಯಾದಿಯಾಗಿ ಒಟ್ಟು ಮೊತ್ತ ರೂ. 4282.22 ಲಕ್ಷ ಮೊತ್ತದಲ್ಲಿ ಮುಂದುವರೆದ ಕಾಮಗಾರಿ ಸಹಿತ (46) ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, ಅವುಗಳಲ್ಲಿ (24) ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಬಾಕಿ ಉಳಿದ 22 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಅಭಿವೃದ್ಧಿ ಕಾಮಗಾರಿಗಳಿಗಾಗಿ 2018-19 ನೇ ಸಾಲಿನ ಬಜೆಟಿನಲ್ಲಿ ಒಟ್ಟು ರೂ. 7083.00 ಲಕ್ಷಗಳನ್ನು ಕಾಯ್ದಿರಿಸಿದ್ದು, ಈ ಪೈಕಿ ರೂ. 2119.94 ಲಕ್ಷಗಳು ಖರ್ಚಾಗಿರುತ್ತವೆ.
2. ಕಲಬುರಗಿ-ಜೇವರ್ಗಿ ರಾಜ್ಯ ಹೆದ್ದಾರಿಗೆ ಹೊಂದಿಕೊಂಡು ಕೋಟನೂರ-ಡಿ ಗ್ರಾಮದ 153 ಎಕರೆ 10 ಗುಂಟೆ ಜಮೀನನ್ನು ಭೂ-ಸ್ವಾಧೀನ ಕಾಯ್ದೆ ಅನ್ವಯ ಸ್ವಾಧೀನಪಡಿಸಿಕೊಂಡು ಕೆ.ಯು.ಡಿ.ಎ. ಕಾಯ್ದೆ 1987 ರ ಕಲಂ 18 ರಡಿಯಲ್ಲಿ ಸರ್ಕಾರದಿಂದ ಆಡಳಿತಾತ್ಮಕ ಮಂಜೂರಾತಿಯನ್ನು ದಿನಾಂಕ: 05-11-2012 ರಂದು ಪಡೆಯಲಾಗಿರುತ್ತದೆ. ಈ ಯೋಜನೆಯಲ್ಲಿ ರಸ್ತೆ ನಿರ್ಮಾಣ ಮತ್ತು ತೆರೆದ ಚರಂಡಿ ನಿರ್ಮಾಣಕ್ಕಾಗಿ ರೂ. 2501.25 ಲಕ್ಷ ಮೊತ್ತದಲ್ಲಿ ಇ-ಪ್ರೋಕ್ಯೂರಮೆಂಟ ಟೆಂಡರ ಮೂಲಕ ಸರ್ಕಾರದ ಅನುಮತಿಯೊಂದಿಗೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಸದರಿ ಕಾಮಗಾರಿಗಾಗಿ ಇಲ್ಲಿಯವರೆಗೆ ರೂ. 2706.91 ಲಕ್ಷ ವೆಚ್ಚವಾಗಿರುತ್ತವೆ. ಸದರಿ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.
3. ಮಾದರನಸಹಳ್ಳಿ, ಧರಿಯಾಪೂರ-ಕೋಟನೂರ, ಕೋಟನೂರ-ಡಿ (ಅಟಲ ಬಿಹಾರಿ ವಾಜಪೇಯಿ) ಬಡಾವಣೆಗಳಿಗೆ ರೂ. 41.00 ಕೋಟಿ ಮೊತ್ತದಲ್ಲಿ ಡಿ.ಸಿ.ಡಬ್ಲ್ಯೂ ರಡಿಯಲ್ಲಿ ಕ.ನ.ನಿ.ಸ. ಮತ್ತು ಒ.ಚ. ಮಂಡಳಿಗೆ ವಹಿಸಿಕೊಡಲಾಗಿದ್ದು ಈಗಾಗಲೇ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ರವರಿಗೆ ರೂ.32.838 ಕೋಟಿ ಮೊತ್ತ ಪಾವತಿಸಲಾಗಿದೆ. ಕಾಮಗಾರಿಗಳು ಪೂರ್ಣಗೊಂಡಿದ್ದು, ಹೈಡ್ರಾಲಿಕ್ ಟೆಸ್ಟ್ ಮಾಡಿಸುವುದು ಬಾಕಿ ಇರುತ್ತದೆ.
4. ಪ್ರಾಧಿಕಾರ ಸಭೆಯ ನಿರ್ಣಯದಂತೆ ನಗರ ಸೌಂದರ್ಯೀಕರಣದಡಿಯಲ್ಲಿ ವಿವಿಧ ಬಡಾವಣೆಗಳಲ್ಲಿರುವ (8) ಉದ್ಯಾನವನಗಳಿಗೆ ಕಂಪೌಂಡ ಗೋಡೆ ನಿರ್ಮಾಣ ಮತ್ತು ವಾಕಿಂಗ್ ಟ್ರ್ಯಾಕ್ ಅಳವಡಿಸಲು ಟೆಂಡರ ಮೂಲಕ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು ಅವುಗಳಲ್ಲಿ (04) ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಇನ್ನೂ 04 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.
5. ಪ್ರಾಧಿಕಾರ ಹಾಗೂ ಖಾಸಗಿ ಬಡಾವಣೆಗಳಲ್ಲಿ ಲಭ್ಯವಿದ್ದ (65) ಸಾರ್ವಜನಿಕ ಸೌಲಭ್ಯೀಕರಣ ನಿವೇಶನಗಳನ್ನು ಸರ್ಕಾರಿ ಇಲಾಖೆ ಹಾಗೂ ಇನ್ನಿತರ ಸಂಘ ಸಂಸ್ಥೆಗಳಿಗೆ ಹಂಚಿಕೆ ಮಾಡಲು ಪ್ರಕಟಣೆಯನ್ನು ಹೊರಡಿಸಲಾಗಿದೆ. ಸಾರ್ವಜನಿಕರಿಂದ ಅರ್ಜಿಗಳನ್ನು ಸ್ವೀಕರಿಸಿ (03) ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ.

4. **ತೆಗೆದುಕೊಳ್ಳಲು ಉದ್ದೇಶಿಸಲಾದ ಹೊಸ ಕಾರ್ಯಕ್ರಮಗಳ ವಿವರ:–**

1. ಪ್ರಾಧಿಕಾರದ ಎಂ.ಎಸ್.ಕೆ.ಮಿಲ್ ವಾಣಿಜ್ಯ ಯೋಜನೆಯಲ್ಲಿಯ 2 ಎಕರೆ ನಿವೇಶನದಲ್ಲಿ ಶಾಪಿಂಗ ಮಾಲ್ ಕಟ್ಟಡ ನಿರ್ಮಿಸಲು ಡಿಸೈನ ತಯ್ಯಾರಿಸಲಾಗಿದ್ದು IDeCK ಸಹಯೋಗದೊಂದಿಗೆ ಪಿ.ಪಿ.ಪಿ. ಮೂಲಕ ಕೈಕೊಳ್ಳಲು ಕ್ರಮವಹಿಸಲಾಗಿದ್ದು ಸರ್ಕಾರದಿಂದ ಆಡಳಿತ ಮಂಜೂರಾತಿಯನ್ನು ದಿನಾಂಕ: 27–12–2012 ರಂದು ಪಡೆಯಲಾಗಿದ್ದು ಐ.ಡಿ.ಡಿ. ವತಿಯಿಂದ ಕ್ಲಿಯರೇನ್ಸ್ ಬಂದ ನಂತರ ಹಾಗೂ ಸ್ಥಳದ ಮೇಲೆ ತಡೆಯಾಜ್ಞೆ ಇದ್ದ ಪ್ರಯುಕ್ತ ಟೆಂಡರ ಕರೆಯಲು ವಿಳಂಬವಾಗಿರುವುದು. ತಡೆಯಾಜ್ಞೆ ತೆರವಾಗಿದ್ದು, ಟೆಂಡರ ಕರೆಯುವುದಕ್ಕಾಗಿ IDeCK ರವರಿಗೆ ಟೆಂಡರ ದಾಖಲೆಗಳನ್ನು ಅಂತಿಮಗೊಳಿಸಿ ಕೊಡಲು ವಿನಂತಿಸಲಾಗಿದೆ. ಸದರಿಯವರು ಟೆಂಡರ ದಾಖಲೆಗಳನ್ನು ಅಂತಿಮಗೊಳಿಸಿದ ನಂತರ ಟೆಂಡರ ಕರೆಯಲಾಗುವುದು.

2. ಎಂ.ಎಸ್.ಕೆ.ಮಿಲ್ (ವಾಣಿಜ್ಯ) ಬಡಾವಣೆಯಲ್ಲಿ ನಿವೇಶನ ಸಂಖ್ಯೆ 132 ರಲ್ಲಿ ನೂತನ ಮಾದರಿಯ ಕಾಯಿಪಲ್ಲೆ ಮಾರುಕಟ್ಟೆ ನಿರ್ಮಿಸಲು ಮುಖ್ಯ ಇಂಜೀನಿಯರರು. ಲೋಕೋಪಯೋಗಿ ಇಲಾಖೆ, ಧಾರವಾಡರವರಿಂದ ತಾಂತ್ರಿಕ ಮಂಜೂರಾತಿ ಪಡೆಯಲಾಗಿದ್ದು ಆಡಳಿತಾತ್ಮಕ ಮಂಜೂರಾತಿಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಆದರೆ ಸದರಿ ನಿವೇಶನದ ಮಾಲೀಕತ್ವದ ಬಗ್ಗೆ ಸ್ಪಷ್ಟತೆ ಇರದ ಕಾರಣ ಇದನ್ನು ಸರ್ಕಾರದಿಂದ ರದ್ದುಪಡಿಸಲಾಗಿರುತ್ತದೆ. ಸದರಿ ನಿವೇಶನದ ಪಕ್ಕದಲ್ಲಿರುವ ನಿವೇಶನ ಸಂಖ್ಯೆ 131 ರಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಕಲಬುರಗಿ ಮತ್ತು ಪ್ರಾಧಿಕಾರ ಜಂಟಿಯಾಗಿ ನೂತನ ಮಾದರಿಯ ಕಾಯಿಪಲ್ಲೆ ಮಾರುಕಟ್ಟೆ ನಿರ್ಮಿಸಲು ಯೋಜಿಸಿ ಕ್ರಮವಹಿಸಲಾಗಿದೆ. ಇದಕ್ಕೆ ಸರ್ಕಾರದಿಂದ ಅನುಮತಿ ಕೂಡಾ ಪಡೆಯಲು ಪ್ರಸ್ತಾವನೆ ಸಲ್ಲಿಸಲಾಗಿದೆ.

3. ಹಾಗರಗಾ ಗ್ರಾಮದ ವಿವಿಧ ಸರ್ವೆ ನಂಬರಗಳಲ್ಲಿ ಒಟ್ಟು 117 ಎಕರೆ 05 ಗುಂಟೆ ಜಮೀನಿನಲ್ಲಿ ರೈತರ ಸಹಭಾಗಿತ್ವದ 50:50 ಅನುಪಾತದಲ್ಲಿ ವಸತಿ ಯೋಜನೆಯನ್ನು ರೂ. 76.00 ಕೋಟಿ ಮೊತ್ತದಲ್ಲಿ ಅಭಿವೃದ್ಧಿಪಡಿಸಲು ಸರ್ಕಾರದಿಂದ ಆಡಳಿತಾತ್ಮಕ ಮಂಜೂರಾತಿಗಾಗಿ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಸರ್ಕಾರದಿಂದ ಇನ್ನೂ ಮಂಜೂರಾತಿ ದೊರಕಿರುವುದಿಲ್ಲ.

4. ಕುಸನೂರ ಗ್ರಾಮದ ವಿವಿಧ ಸರ್ವೆ ನಂಬರ ಒಟ್ಟು ವಿಸ್ತೀರ್ಣ 90 ಎಕರೆ 17 ಗುಂಟೆ ಜಮೀನಿನಲ್ಲಿ ನೂತನ ವಸತಿ ಯೋಜನೆಯನ್ನು ರೂ. 117.00 ಕೋಟಿ ಮೊತ್ತದಲ್ಲಿ ಕೈಗೆತ್ತಿಕೊಳ್ಳಲು ಪ್ರಸ್ತಾವನೆ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಸರ್ಕಾರವು ದಿನಾಂಕ 24–01–2019 ರಂದು ಸದರಿ ಯೋಜನೆಯನ್ನು ರೂ. 94.80 ಕೋಟಿ ಮೊತ್ತದಲ್ಲಿ ಅಭಿವೃದ್ಧಿಪಡಿಸಲು ಆಡಳಿತಾತ್ಮಕ ಮಂಜೂರಾತಿ ನೀಡಿರುತ್ತದೆ. ಅದರಂತೆ ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದೆ.

**5. ಪರಿಶಿಷ್ಟ– ಜಾತಿ / ಪರಿಶಿಷ್ಟ ಪಂಗಡ/ ಮಹಿಳೆಯರ/ಅಲ್ಪಸಂಖ್ಯಾತರ ಅಭಿವೃದ್ಧಿ ಕಾರ್ಯಕ್ರಮಗಳ ಆರ್ಥಿಕ/ ಭೌತಿಕ ಪ್ರಗತಿ**

ಈ ಸಾಲಿನಲ್ಲಿ ಹಂಚಿಕೆಯಾಗಿರುವುದಿಲ್ಲ.

**6. ವಿಶೇಷ ಘಟಕ ಯೋಜನೆ/ ಗಿರಿಜನ ಅಭಿವೃದ್ಧಿ ಯೋಜನೆಗಳ ವಿವರಗಳು**

ಈ ಸಾಲಿನಲ್ಲಿ ಯೋಜನೆಗಳು ಇರುವುದಿಲ್ಲ.

**7. ಕೇಂದ್ರ ಪುರಸ್ಕೃತ/ ವಿದೇಶಿ ನೆರವಿನ ಯೋಜನೆಗಳ ವಿವರಗಳು.**

ಈ ಸಾಲಿನಲ್ಲಿ ಕೇಂದ್ರ ಪುರಸ್ಕೃತ/ವಿದೇಶಿ ನೆರವಿನ ಯೋಜನೆಗಳು – ಇರುವುದಿಲ್ಲ.

**8. ಇತರೆ ಯೋಜನೆಗಳ ವಿವರ :–**

ಈ ಸಾಲಿನಲ್ಲಿ ಯೋಜನೆಗಳು ಇರುವುದಿಲ್ಲ.

ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರ
ಕಲಬುರಗಿ.

ANNUAL REPORT FOR THE YEAR 2019-20

**(01-04-2019 to 31-03-2020)**

**1. Annual Budget Estimate and expenditure**

Amount in Lakhs

| Year | Income | Expenditure |
|---|---|---|
| Amount provided in the Budget estimate | 18452.00 | 18279.00 |
| 01-04-2019 to 31-03-2020 | 1074.76 | 3296.00 |

**2. Demand , Collection, & Balance**

**Rs. Crores**

| Total Scheme | Demand | Collection, | Balance |
|---|---|---|---|
| 20 | 0.5 | 0.49 | 0.37 |
| Plot Sale Amount | 0.36 | | |
| Total | 0.86 | 0.49 | 0.37 |

**3 . Financial and physical progress of the Development works**

Amount in Lakhs

| Sl. No. | Development works | Financial progress from **(01-04-2019 to 31-03-2020)** | |
|---|---|---|---|
| 1 | Development works such as Formation of Roads, Construction of open Drains, C.D.works, B.T. road, Electrification, Water supply arrangements, construction of compound wall , waking track in the park, Construction of Kalyan Mantap and Suvarna Karnataka Shopping Complex & and officer's residence improvements to park etc., | 4018.00 | 769.11 |
| 2 | M.S.K.Mill Commercial and residential scheme. & Madarasanahalli (MSK Mill Phase-II) | 1335.00 | 453.83 |
| 3 | Atal Bihari Vajpayee Residential Scheme. | 1730.00 | 897.00 |
| | **Total** | **7083.00** | **2119.94** |

**PHYSICAL PROGRESS:-**

1. During 2019-20 in (6) schemes and Beautification of the city the development works such as Metal road, B.T. road, Construction of Open Drain & C.D. works, UGD, Water supply, Electricity, construction of compound wall works to the tune of Rs. 4282.22 Lakhs pertaining to (46) works have been taken up by the KUDA and out of which (24) works have been completed. Balanced (22) works in progress. An Amount of Rs. 7083.00 Lakhs were reserved for the development works during the year 2019-20, out of which an amount of Rs. 2119.94 Lakhs has been incurred.

2. At the State Highway Kalaburagi to Jewargi Road a new residential scheme Kotnoor-D (i.e, Atal Bihari Vajpayee) to the extent of 153 Acres 10 Guntas is formed. The proposed scheme was sanctioned by the Govt. on dated: 05-11-2012 under KUDA Act 1987 u/s 18 (3). In this scheme the development works i.e, formation of Road, Construction of CC Drain and culvert to the tune of Rs. 2501.25 Lakh work was taken on e-procurement tender basis. The expenditure made up to the end of this year is Rs. 2706.91 Lakhs.

3. Madarasana halli, Dariyapur-Kotnoor, Kotnoor-D (Atal Bihari Vajpayee) Scheme for the work of D.C.W. The works is taken from KUWS &DB Board for the amount Rs. 41.00 Crores. The work is completed. The total expenditure is incurred up to the end of this year is Rs. 32.838 Crore. The Hydraulic test is to be done by the KUWS & DB.

4 As per Authority resolution Kalaburagi city Beautification K.U.D.A. has Taken up (8) in compound wall and Walking track to the various parks and out of which (04) works have been completed on tender basis. Remaining 06 works are in progress.

5. Totally (65) C.A. Sites were available for allotment in KUDA & Private layout, and notified for allotment in this (03) CA site are allotted to various Society / Government Departments.

**4 .PROPOSED NEW SCHEMES:-**

1. In M.S.K.Mill commercial Layout 2-00 Acres of land reserved for the Shopping Mall on PPP/Share Basis with the co-ordination of IDeCK and Govt. administration approval is sanctioned on dated: 27-12-2012. After taking the clearance from IDD and court has vacated stay order, The Authority has requested to IDeCK to finalized the tender document. After finalized the tender document the Authority has called tender.

2. The construction of New Modern vegetable market at MSK Mill (Commercial) layout in Plot No. 132 is taken of and the proposal submitted to the Govt. for administrative approval. But the Government has rejected the proposal. Hence this Authority has taken the action for fresh proposal in the plot No. 131. Meanwhile as per Authority resolution to develop on joint venture basis by the KUDA and APMC. The proposal have been submitted to Government approval.

3. In Hagarga village various Sy. No. total extent 117 Acre 05 Gunta a new 50: 50 Share basis development scheme a tune of Rs. 76.00 crores has prepared and submitted to Government for administrative approval. After approval the authority has taken further action.

4. In Kusnoor village various Sy. No. total extent 90 Acre 17 Gunta a new residential development scheme a tune of Rs. 117.00 crores has prepared and submitted to Government for administrative approval. The Government has given administrative approval for Rs. 94.80 crore on dated: 24-01-2019. The Land purchase process is in progress.

**5. S.C./ ST/Women/Backward Class Development programs /Economic/ Physical programs .**

–Not taken any such schemes.

**6. Special Component Planning / Tribal Development Planning Details**

–Not taken any such schemes.

**7. Central Assistance / Foreign Assistance plan Details**

–Not taken any such schemes.

**8. OTHER SCHEMES:**

–Not taken any such schemes.

Commissioner
Urban Development Authority
Kalaburagi

## ಕರ್ನಾಟಕ ವಿಧಾನ ಮಂಡಲದ ಸಭೆಯ ಮುಂದೆ ಇಡಲಾದ ಕಾಗದ ಪತ್ರಗಳ ಸಮಿತಿ ವಾರ್ಷಿಕ ವರದಿ ನಮೂನೆ

### ಇಲಾಖೆ :- ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರ ಕಲಬುರಗಿ.

| ವರ್ಷ | ವರ್ಷವಾರು ಆಡಳಿತ ವರದಿ ಪೂರ್ಣಗೊಳಿಸಿ ಸಿದ್ಧಪಡಿಸಬೇಕಾದ ದಿನಾಂಕ | ವರ್ಷವಾರು ಆಡಳಿತ ವರದಿ ಸಿದ್ಧಪಡಿಸಿದ ದಿನಾಂಕ | ವಿಳಂಬಕ್ಕೆ ಯಾವುದಾದರೂ ಕಾರಣಗಳು ಇದ್ದರೆ | ರಾಜ್ಯ ಲೆಕ್ಕ ಪರಿಶೋಧನಾ ಇಲಾಖೆಯವರಿಗೆ ಪರಿಶೋಧನೆ ನಡೆಸಲು ಕೋರಿ ಬರೆದ ಪತ್ರದ ಉಲ್ಲೇಖ ಮತ್ತು ದಿನಾಂಕ | ರಾಜ್ಯ ಲೆಕ್ಕ ಪರಿಶೋಧನ ಇಲಾಖೆಯವರಿಗೆ ಪರಿಶೋಧನಾ ಇಲಾಖೆಯವರು ಲೆಕ್ಕ ಪರಿಶೋಧನೆ ಪ್ರಾರಂಭಿಸಿದ ಮತ್ತು ಪೂರ್ಣಗೊಳಿಸಿದ ದಿನಾಂಕ ನಡೆಸಲು ಕೋರಿ ಬರೆದ ಪತ್ರದ ಉಲ್ಲೇಖ ಮತ್ತು ದಿನಾಂಕ | ರಾಜ್ಯ ಲೆಕ್ಕ ಪರಿಶೋಧನಾ ಇಲಾಖೆಯವರು ಲೆಕ್ಕ ಪರಿಶೋಧನೆಯ ಲೆಕ್ಕ ಪ್ರಮಾಣ ಪತ್ರವನ್ನು ನೀಡಿದ ಪತ್ರದ ಉಲ್ಲೇಖ ಮತ್ತು ದಿನಾಂಕ | ಅವುಗಳು ಅಚ್ಚಿಗಾಗಿ ನೀಡಿದ ಮತ್ತು ಅಚ್ಚು ಪ್ರತಿಗಳನ್ನು ಪಡೆದ ದಿನಾಂಕ | ಪ್ರತಿಗಳನ್ನು ಶಾಸಕಾಂಗ ಸಭೆಯಲ್ಲಿ ಸಚಿವಾಲಯಕ್ಕೆ ಸಲ್ಲಿಸಿದ ಪತ್ರದ ಉಲ್ಲೇಖ ಮತ್ತು ದಿನಾಂಕ | ಪ್ರತಿಗಳನ್ನು ಶಾಸಕಾಂಗ ಸಭೆಯಲ್ಲಿ ಮಂಡಿಸಲು ವಿಳಂಬಕ್ಕೆ ಕಾರಣಗಳು | ಷರಾ |
|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 |
| 2019-20 | 01-04-2021 | 08-03-2021 | ಸಿಬ್ಬಂದಿಯವರ ಕೊರತೆ ಇದ್ದ ಕಾರಣ ವಿಳಂಬವಾಗಿರುತ್ತದೆ. | ಅನ್ವಯಿಸುವುದಿಲ್ಲ | ಅನ್ವಯಿಸುವುದಿಲ್ಲ | ಅನ್ವಯಿಸುವುದಿಲ್ಲ | ಅಚ್ಚಿಗಾಗಿ ನೀಡಿದ ದಿನಾಂಕ : 08-04-2021 ಪಡೆದ ದಿನಾಂಕ : 26-04-2021 | ದಿನಾಂಕ: 01-04-2019 ರಿಂದ 31-03-2020 ರ ವರೆಗೆ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ವಾರ್ಷಿಕ ವರದಿ ತಯ್ಯಾರಿಸಿ ಈ ಕಛೇರಿ ಪತ್ರ ದಿನಾಂಕ:28-04-2021 ರಂದು 400 ಪ್ರತಿಗಳನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಮುದ್ರಿಸಿ ಸಲ್ಲಿಸಲಾಗುತ್ತಿದೆ. | ಸಿಬ್ಬಂದಿಯವರ ಕೊರತೆ ಇದ್ದ ಕಾರಣ ವಿಳಂಬವಾಗಿರುತ್ತದೆ. | |

ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರ
ಕಲಬುರಗಿ.